**<u>ಸಾಕ್ಷಿಗೆ ದಿನಾಂಕ 28.08.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 1 ನೇ ಎದುರುದಾರರ ಪರ ಶ್ರೀ.ಜೆ ಜಿ ಎಸ್ ವಕೀಲರಿಂದಃ</u>**

1. ಅಪಘಾತದ ಸಮಯಕ್ಕೆ ನನಗೆ 36 ವರ್ಷ ವಯಸ್ಸಾಗಿತ್ತು ಎಂದರೆ ಸರಿಯಲ್ಲ. ಇತ್ತೀಚಿಗೆ ನನಗೆ 32 ವರ್ಷ ತುಂಬಿ 33 ವರ್ಷ ಪ್ರಾರಂಭವಾಗಿದೆ. ನನ್ನ ಜನ್ಮ ದಿನಾಂಕ 26-11-1993 ಆಗಿರುತ್ತದೆ. ಅಪಘಾತವು ಮಧ್ಯರಾತ್ರಿ 1.00 ಗಂಟೆಗೆ ಆಗಿರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನಾನು ದ್ವಿಚಕ್ರ ವಾಹನವನ್ನು ಚಾಲಯಿಸುತ್ತಿದ್ದೇನು. ಆ ದಿನ ನಾನು ಹೆಬ್ಬುಗೊಡಿಯಿಂದ ಚಂದಾಪುರಕ್ಕೆ ಬರುತ್ತಿದ್ದೆ. ಆ ದಿನ ನಾನು ನನ್ನ ಹೆಬ್ಬುಗೊಡಿಯಲ್ಲಿರುವ ಸ್ನೇಹಿತನ ಕಡೆ ಹೋಗಿದ್ದೆ. ದೂರನ್ನು ನನ್ನ ಸಂಬಂಧಿಕ ಆಸೀಫ್ ನೀಡಿರುತ್ತಾರೆ. ಸದರಿ ದೂರು ಸರಿಯಾಗಿದೆ. ಆಸೀಫ್ ರವರು ಅಪಘಾತವನ್ನು ನೋಡಿಲ್ಲ ಎಂದರೆ ಸರಿ. ಆಸೀಫ್ ರವರಿಗೆ ಅಪಘಾತದ ಬಗ್ಗೆ ಮಾಹಿತಿ ನಾನು ನೀಡಿರುವುದಿಲ್ಲ, ಆದರೆ ಅವರೇ ಬಂದು ನನ್ನನ್ನು ಆಸ್ಪತ್ರೆ ಕರೆದುಕೊಂಡು ಹೋಗಿರುತ್ತಾರೆ. ನಾನು ಬಿ.ಕಾಂ ಪಧವೀದರನಾಗಿರುತ್ತೇನೆ. ಆಸೀಫ್ ರವರು ನನ್ನ ಅಕ್ಕನ ಮಗ.

2. ನಾನು ಅಪಘಾತದ ದಿನ ಟಿಸಿಎಸ್ ನಲ್ಲಿ ರಾತ್ರಿ ಪಾಳೆಯ ಕೆಲಸ ಮುಗಿಸಿ ಬರುತ್ತಿದ್ದೆ ಎಂದರೆ ಸರಿಯಲ್ಲ, ನಾನು ವೈಎಂಡಿ ಇಂಜಿನಿಯರಿಂಗ್ ವರ್ಕ್ಸ್ ನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ವೈಎಂಡಿ ಇಂಜಿನಿಯರಿಂಗ್ ವರ್ಕ್ಸ್ ನಲ್ಲಿ ಕೆಲಸ ಮುಗಿಸಿ ಬರುವಾಗ ಅಪಘಾತವಾಗಿದೆ ಎಂದರೆ ಸರಿಯಲ್ಲ. ನಾನು ಪೊಲೀಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯ ಮಾಹಿತಿ ಇರುತ್ತದೆ. ಸದರಿ ಹೇಳಿಕೆಯ ಪ್ರಕಾರ ಅಪಘಾತದ ದಿನ ನಾನು ಟಿಸಿಎಸ್ ನಲ್ಲಿ ಎರಡನೇ ಶಿಫ್ಟ್ ಕೆಲಸ ಮುಗಿಸಿ ಹೋಗುತ್ತಿದ್ದೆ ಎಂದರೆ ಸರಿಯಲ್ಲ.

3. ಅದೇ ರೀತಿ ನಿಪಿ.2 ರ ಪ್ರಕಾರ ದೂರಿನಲ್ಲಿಯೂ ಸಹ ನಾನು ಟಿಸಿಎಸ್ ನಲ್ಲಿ ಎರಡನೇ ಶಿಫ್ಟ್ ಕೆಲಸ ಮುಗಿಸಿ ಹೋಗುತ್ತಿದ್ದೆ ಎಂದು ನಮೂದು ಇದೆ ಎಂದರೆ ಸರಿಯಲ್ಲ. ಆಸೀಫ್ ರವರಿಗೆ

ನನ್ನ ಬಗ್ಗೆ ಎಲ್ಲಾ ಮಾಹಿತಿ ಇದೆ ಎಂದರೆ ಸರಿ. ದೂರಿನಲ್ಲಿ ನಾನು ಕೆಲಸ ಮುಗಿಸಿಕೊಂಡು ಬರುವಾಗ ಅಪಘಾತವಾಗಿದೆ ಎಂದು ನಮೂದು ಇದೆ ಎಂದರೆ ದೂರಿನಲ್ಲಿ ತಪ್ಪಾಗಿರುತ್ತದೆ. ಆಸೀಫ್ ರವರು ದೂರನ್ನು ತಪ್ಪಾಗಿ ನೀಡಿರುತ್ತಾರೆ ಎಂದರೆ ನನ್ನ ಕೆಲಸ ಮುಗಿಸಿಕೊಂಡು ಬರುತ್ತಿದ್ದೆ ಎಂದು ಮಾತ್ರ ತಪ್ಪಾಗಿ ನೀಡಿರುತ್ತಾರೆ.

4. ಅಪಘಾತವು ರಾ.ಹೆ.-44 ರ ಸರ್ವೀಸ್ ರಸ್ತೆಯ ಮೇಲೆ ಆಗಿರುತ್ತದೆ. ಎರಡನೇ ಎದುರುದಾರರ ವಾಹನವು ಬೊಮ್ಮಸಂದ್ರ ಕಡೆಯಿಂದ ಬರುತ್ತಿದ್ದು ಆಗ ನಾನು ಹೆಬ್ಬುಗೊಡಿಯಿಂದ ಚಂದಾಪುರಕ್ಕೆ ಹೋಗುತ್ತಿದ್ದೇನು. ಎರಡನೇ ಎದುರುದಾರರ ವಾಹನವು ರಾಷ್ಟ್ರೀಯ ಹೆದ್ದಾರಿಯಲ್ಲಿ ಹೊಸೂರಿನಿಂದ ಬೆಂಗಳೂರಿಗೆ ಬರುತ್ತಿತ್ತು ಎಂದರೆ ಸರಿಯಲ್ಲ. ಸರ್ವೀಸ್ ರಸ್ತೆಯಲ್ಲಿ ಲಾರಿ ಮತ್ತು ಬಸ್ಸುಗಳಿಗೆ ಬರುವ ಅವಕಾಶವಿಲ್ಲ ಎಂದರೆ ಸರಿ. ನಾನು ಸರ್ವೀಸ್ ರಸ್ತೆಯಲ್ಲಿ ಬರುವಾಗ ಲಾರಿಯು ಮುಖ್ಯ ರಸ್ತೆಯಲ್ಲಿ ಬರುತ್ತಿತ್ತು ಎಂದರೆ ಸರಿಯಲ್ಲ. ಪೊಲೀಸರು ತಯಾರಿಸಿರುವ ಸ್ಥಳದ ಕಚ್ಚಾ ನಕಾಶೆಯನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ.

5. ಸರ್ವೀಸ್ ರಸ್ತೆ ಅದರ ಪಕ್ಕದಲ್ಲಿ ಹೊಸೂರು-ಬೆಂಗಳೂರು ಹೆದ್ದಾರಿ ರಸ್ತೆ, ಅದರ ಪಕ್ಕದಲ್ಲಿ ಮೆಟ್ರೋ ಪಿಲ್ಲರ್, ಸದರ ಪಕ್ಕದಲ್ಲಿ ಬೆಂಗಳೂರು-ಹೊಸೂರು ಹೆದ್ದಾರಿ ರಸ್ತೆ ಇದೆ ಎಂದರೆ ಸರಿ. ಸರ್ವೀಸ್ ರಸ್ತೆಯಲ್ಲಿ ದ್ವಿಚಕ್ರ ವಾಹನ ಮತ್ತು ಕಾರುಗಳಿಗೆ ಬಿಟ್ಟರೇ ಬೇರೆ ವಾಹನಗಳಿಗೆ ಬರುವ ಅವಕಾಶವಿಲ್ಲ ಎಂದರೆ ಸರಿ. ಶೆಟ್ರಾನ್ ಕಂಪನಿಯ ಮುಂಭಾಗದ ರಸ್ತೆಯಲ್ಲಿ ಅಪಘಾತವಾಗಿದ್ದು ಅಲ್ಲಿ ಸರ್ಕಲ್ ಇರುವುದಿಲ್ಲ. ಪೊಲೀಸ್ ದಾಖಲೆಗಳ ಪ್ರಕಾರ ಸದರಿ ಸ್ಥಳದಲ್ಲಿ ಸರ್ಕಲ್ ಇದೆ ಎಂದರೆ ಅದು ತಪ್ಪಾಗಿರುತ್ತದೆ. ಎಲ್ಲಾ ಪೊಲೀಸ್ ದಾಖಲೆಗಳು ತಪ್ಪು-ತಪ್ಪಾಗಿ ಮತ್ತು ಸುಳ್ಳಾಗಿ ಇವೆ ಎಂದರೆ ಸರಿಯಲ್ಲ.

6. ನಾನು ಮನೆಗೆ ಹೋಗುವ ಅವಸರದಲ್ಲಿ ಲಾರಿಯು ಮುಂದೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ನನ್ನ ದ್ವಿಚಕ್ರ ವಾಹನಕ್ಕೆ ಏನೇನು ಜಖಂಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ನಿಪಿ.4 ಐಎಂವಿ ವರದಿಯ ಪ್ರಕಾರ ನನ್ನ ದ್ವಿಚಕ್ರ ವಾಹನದ ಮುಂಭಾಗ ಸಂಪೂರ್ಣ ಜಖಂಗೊಂಡಿದೆ ಎಂದರೆ ಸರಿ. ಅದೇ ರೀತಿ ಲಾರಿಯ ಮಂಭಾಗ ಬಂಪರ್ ಜಖಂಗೊಂಡಿದೆ ಎಂದರೆ ಸರಿಯಲ್ಲ. ಅಪಘಾತವು ಮುಖಾಮುಖಿಯಾಗಿರುತ್ತದೆ ಎಂದರೆ ಸರಿ. ಲಾರಿಯನ್ನು ಎಷ್ಟು ದೂರದಿಂದ ನೋಡಿದ್ದೀರಾ ಎಂದರೆ ಲಾರಿಯು ಏಕಾಏಕಿಯಾಗಿ ಹೆದ್ದಾರಿ ರಸ್ತೆಯಿಂದ ಸರ್ವೀಸ್ ರಸ್ತೆಗೆ ಬಂದಿರುತ್ತದೆ, ಅದನ್ನು ಗಮನಿಸಲು ಸಾಧ್ಯವಾಗಿಲ್ಲ. ಲಾರಿಯು ಹೆದ್ದಾರಿ ರಸ್ತೆಯಿಂದ ಸರ್ವೀಸ್ ರಸ್ತೆಗೆ ಏಕಾಏಕಿ ಬಂದಿರುತ್ತದೆ ಎಂದು ಪೊಲೀಸ್ ದಾಖಲೆಗಳಲ್ಲಿ ನಮೂದಾಗಿರುವುದಿಲ್ಲ ಎಂದರೆ ಸರಿ. ದೂರಿನಲ್ಲಿ ಅಪಘಾತವು ಸರ್ವೀಸ್ ರಸ್ತೆಯಲ್ಲಿ ಆಗಿಲ್ಲ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.ಅಪಘಾತವು ನನ್ನ ಅಜಾಗರೂಕತೆ ಮತ್ತು ನಿರ್ಲಕ್ಷ್ಯತನದಿಂದ ಉಂಟಾಗಿದೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ ಲಾರಿಯ ಚಾಲಕನ ಯಾವುದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ನಾನೇ ಸರ್ವೀಸ್ ರಸ್ತೆಯಿಂದ ಮುಖ್ಯರಸ್ತೆಗೆ ಹೋಗಿ ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

7. ಅಪಘಾತದ ನಂತರ ನನ್ನನ್ನು ಬೆಸ್ಟ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಆಸ್ಪತೆಯಲ್ಲಿ 4 ದಿನ ಒಳರೋಗಿಯಾಗಿ ದಾಖಲಾಗಿದ್ದೆ. ಆಸ್ಪತ್ರೆಯಿಂದ ನಾನು ಗುಣಮುಖನಾದ ನಂತರ ಬಿಡುಗಡೆಯಾಗಿರುತ್ತೇನೆ ಎಂದರೆ ಸರಿ. ವೈದ್ಯಕೀಯ ಬಿಲ್ಲುಗಳು ನಾನು ಕೆಲಸ ಮಾಡುತ್ತಿದ್ದ ಕಂಪನಿಯಿಂದ ಪಾವತಿ ಆಗಿವೆ ಎಂದರೆ ಸರಿಯಲ್ಲ. ಈಗ ನನಗೆ ಯಾವುದೇ ತೊಂದರೆ ಇಲ್ಲ ಅಲ್ಲ ಸಂಪೂರ್ಣ ಗುಣಮುಖನಾಗಿರುತ್ತೇನೆ ಎಂದರೆ ಸರಿಯಲ್ಲ. ವೈಎಂಡಿ ಇಂಜಿನಿಯರಿಂಗ್ ವರ್ಕ್ಸ್ ಕಂಪನಿಯಲ್ಲಿ ಅಪಘಾತವಾಗುವ ಒಂದು ವರ್ಷ ಪೂರ್ವದಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಬಲ್ಲೇನು. ಈ

ದಿನ ನಾನು ಸಾಕ್ಷಿ ನುಡಿಯಲು ಕಂಪನಿಗೆ ರಜೆ ಹಾಕಿ ಬಂದಿರುತ್ತೇನೆ ಎಂದರೆ ನಾನು ಈಗ ಯಾವುದೇ ಕೆಲಸ ಮಾಡುತ್ತಿಲ್ಲ. ಅಪಘಾತದ ನಂತರ ಸದರಿ ಕಂಪನಿಯವರು ಕೆಲಸ ಮಾಡಲು ಸಾಧ್ಯವಾಗದಿದ್ದರೆ ಬರಬೇಡಿ ಎಂದು ಮೌಖಿಕವಾಗಿ ಹೇಳಿರುತ್ತಾರೆ. ಈಗಲೂ ನಾನು ಸದರಿ ಕಂಪನಿಗೆ ಹೋದರೆ ನನಗೆ ಕೆಲಸ ಇದೆ ಎಂದರೆ ನನಗೆ ಗೊತ್ತಿಲ್ಲ, ವಿಚಾರಿಸಬೇಕು. ಸದರಿ ಕಂಪನಿಯವರನ್ನು ಸಾಕ್ಷ್ಯ ಮಾಡಿಸಬಹುದು.

8. ನಾನು ಅಪಘಾತಕ್ಕಿಂತ ಮುಂಚೆ ಯಾವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೋ ಅದೇ ಕಂಪನಿಯಲ್ಲಿ ಈಗಲೂ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಿಂಗಳಿಗೆ ರೂ.18,000/- ಸಂಪಾದನೆ ಮಾಡುತ್ತಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯಕ್ಕೆ ಮತ್ತು ಇತರೆ ಖರ್ಚುಗಳಿಗೆಗಾಗಿ ರೂ.5,00,000/- ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದ್ಷೇನೆ ಎಂದರೆ ಸರಿಯಲ್ಲ. ನಾನು ಮತ್ತು ಆಸೀಫ್ ಸೇರಿ ಲಾರಿಯ ಚಾಲಕನ ವಿರುದ್ಧ ಸುಳ್ಳು ದೂರು ನೀಡಿರುತ್ತೇವೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ಯಾವುದೇ ತೊಂದರೆ ಆಗದೇ ಇದ್ದರೂ ಸಹ ತೊಂದರೆಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಎರಡನೇ ಎದುರುದಾರರು ಏಕಪಕ್ಷೀಯ. ಈ ಕಾರಣದಿಂದ ವಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿರುತ್ತದೆ.**
**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**